**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - 560 001**

**ಸಂಖ್ಯೆ: ಸಶಿಅ/ಶೈತ/ಸಿ1(5)/ಸಿ.ಆರ್.ಪಿ. ಬಿ.ಆರ್.ಪಿ/2012-13** **ದಿನಾಂಕ: 23-04-2012**

# ಅಧಿಕೃತ ಜ್ಞಾಪನ

ವಿಷಯ: ಸಮೂಹ ಸಂಪನ್ಮೂಲ ವ್ಯಕ್ತಿಗಳ (CRP) ಮತ್ತು ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳ (BRP) ಹುದ್ದೆಗಳನ್ನು ಲಿಖಿತ ಪರೀಕ್ಷೆ ಮೂಲಕ ಭರ್ತಿ ಮಾಡುವ ಬಗ್ಗೆ.

*&*&*&*

1.ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ನಿಟ್ಟಿನಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯ ಉತ್ತಮ ಪಡಿಸುವ ಸಲುವಾಗಿ ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ ಮತ್ತು ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳು ಶಿಕ್ಷಕರಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಮೂಲಕ ಶಿಕ್ಷಕರ ಸಬಲೀಕರಣ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ.

2. ಸರ್ವ ಶಿಕ್ಷಣ ಅಭಿಯಾನದ ಯೋಜನೆ ಅಡಿಯಲ್ಲಿ ಕಾಲಕಾಲಕ್ಕೆ ಸಿ.ಆರ್.ಪಿ ಮತ್ತು ಬಿ.ಆರ್.ಪಿ ಹುದ್ದೆಗಳನ್ನು ಸೃಷ್ಟಿಸಲಾಗಿದೆ. <u>ಖಾಲಿ ಇರುವ ಹಾಗು ಸಂಭವನೀಯ ಖಾಲಿಯಾಗಲಿರುವ ಹುದ್ದೆಗಳನ್ನು</u> ಭರ್ತಿಮಾಡಲು ಆಸಕ್ತಿ ಇರುವ ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತೆ ಮತ್ತು ಲಿಖಿತ ಪರೀಕ್ಷೆ ಹಾಗು ಮೆರಿಟ್ ಆಧಾರದ ಮೇಲೆ ಸದರಿ ಹುದ್ದೆಗಳನ್ನು ತುಂಬಲಾಗುವುದು.

2.1. ಹೆಚ್ಚು ಸಂಖ್ಯೆಯಲ್ಲಿ ಅರ್ಹ ಶಿಕ್ಷಕರು ಪರೀಕ್ಷೆ ತೆಗೆದುಕೊಳ್ಳಲು ಅನುಕೂಲವಾಗುವಂತೆ ವ್ಯಾಪಕ ಪ್ರಚಾರವನ್ನು ನೀಡುವುದು. ಅಧಿಕೃತ ಜ್ಞಾಪನವನ್ನು ಶಿಕ್ಷಕರ ಮಾಹಿತಿಗಾಗಿ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಬ್ಲಾಕ್ ಶಿಕ್ಷಣಾಧಿಕಾರಿಗಳ ಕಛೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸುವುದು. ಇದಲ್ಲದೆ ಈ ಜ್ಞಾಪನದೊಂದಿಗೆ ಲಗತ್ತಿಸಿರುವ ವೇಳಾಪಟ್ಟಿಯಲ್ಲಿ ತಿಳಿಸಿದ ದಿನಾಂಕಗಳಲ್ಲಿ ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದು. ಜಾಹಿರಾತು ನೀಡುವಾಗ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯ ವೆಬ್‌ಸೈಟ್ ವಿಳಾಸ <u>www.ssakarnataka.gov.in</u> ಮಾಹಿತಿಯನ್ನು ಶಿಕ್ಷಕರ ಗಮನಕ್ಕೆ ತಪ್ಪದೆ ತರುವುದು.

**3. ಸಿ.ಆರ್.ಪಿ ಮತ್ತು ಬಿ.ಆರ್.ಪಿ ಹುದ್ದೆಗಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು:**

I. ಪ್ರಾಥಮಿಕ ಶಾಲೆ ವಿಭಾಗದಿಂದ ಸಿ.ಆರ್.ಪಿ ಹಾಗೂ ಬಿ.ಆರ್.ಪಿ. ಯಾಗಿ ಆಯ್ಕೆ ಬಯಸುವವರು ಪ್ರಾಥಮಿಕ ಶಾಲೆಯಲ್ಲಿ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಸರಿಯಾಗಿ ಶಿಕ್ಷಣ ಇಲಾಖೆಯಲ್ಲಿ ಕನಿಷ್ಠ 10 ವರ್ಷ ಶಿಕ್ಷಕರಾಗಿ ಭಾಷೆ-1, ಭಾಷೆ-2, ವಿಜ್ಞಾನ, ಸಾಮಾನ್ಯ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತ ಈ ವಿಷಯಗಳಲ್ಲಿ ಯಾವುದಾದರೂ 2 ವಿಷಯಗಳನ್ನು ಬೋಧಿಸುತ್ತಿರುವುದು ಕಡ್ಡಾಯ. ಅದೇ ರೀತಿ ಬಿ.ಆರ್.ಪಿ ಪ್ರೌಢ ಶಾಲಾ ವಿಭಾಗದಿಂದ ಆಯ್ಕೆ ಬಯಸುವವರು ಪ್ರೌಢ ಶಾಲೆಯಲ್ಲಿ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಸರಿಯಾಗಿ ಕನಿಷ್ಠ 05 ವರ್ಷಗಳು ಗಣಿತ ವಿಜ್ಞಾನ ಅಥವಾ ಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿರುವುದು ಕಡ್ಡಾಯ.

II. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರಿರಬಾರದು.

III. ಯಾವುದೇ ಇಲಾಖಾಶಿಸ್ತು ಕ್ರಮಕ್ಕೆ ಅಥವಾ ನ್ಯಾಯಾಲಯದ ಕ್ರಿಮಿನಲ್ ಪ್ರಕರಣಗಳಲ್ಲಿ ಒಳಗಾಗಿರಬಾರದು.

IV. ಆಯ್ಕೆ ಆದವರು ಶಿಕ್ಷಕರ ಸಂಘದ ಪದಾಧಿಕಾರಿ ಹುದ್ದೆಯಲ್ಲಿರಬಾರದು. ಶಿಕ್ಷಕರ ಸಂಘದ ಪದಾಧಿಕಾರಿಗಳಾಗಿದ್ದು, ಸಿ.ಆರ್.ಪಿ ಅಥವಾ ಬಿ.ಆರ್.ಪಿ ಹುದ್ದೆಗೆ ಆಯ್ಕೆಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲು ಶಿಕ್ಷಕರ ಸಂಘದ ಪದಾಧಿಕಾರಿ ಹುದ್ದೆಯನ್ನು ಕಡ್ಡಾಯವಾಗಿ ತ್ಯಜಿಸತಕ್ಕದ್ದು. ಮತ್ತು ಹಾಗೆಂದು ಲಿಖಿತವಾಗಿ ಬರೆದುಕೊಡತಕ್ಕದ್ದು ಹಾಗೂ ಅದು ನಿಯಮಾನುಸಾರ ಅಂಗೀಕೃತವಾಗಿರತಕ್ಕದ್ದು.

V. ಮುಖ್ಯ ಶಿಕ್ಷಕರು ಸಹ ಸಿ.ಆರ್.ಪಿ ಮತ್ತು ಬಿ.ಆರ್.ಪಿ ಹುದ್ದೆ ಹೊಂದಲು ಸದರಿ ಸುತ್ತೋಲೆಯಂತೆ ಅರ್ಹರಿರುತ್ತಾರೆ.

VI. ಸಿ.ಆರ್.ಪಿ ಮತ್ತು ಬಿ.ಆರ್.ಪಿ ಹುದ್ದೆಯ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟ್‌ನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು.

VII. ಸಿ.ಆರ್.ಪಿ ಮತ್ತು ಬಿ.ಆರ್.ಪಿ ಆಗಿ ಆಯ್ಕೆ ಬಯಸುವವರು ಲಿಖಿತ ಆಯ್ಕೆ ಪರೀಕ್ಷೆಯನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಮೆರಿಟ್ ಆಧರಿಸಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

VIII. ಟಿ.ಜಿ.ಟಿ. ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರು ಬಿ.ಆರ್.ಪಿ/ಸಿ.ಆರ್.ಪಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

IX. ಖಾಲಿ ಇರುವ ಸಿ.ಆರ್.ಪಿ/ಬಿ.ಆರ್.ಪಿ ಹಾಗೂ ಉರ್ದು ಭಾಷೆಯ ಸಿ.ಆರ್.ಪಿ ಹುದ್ದೆಗಳಿಗೆ ಹೊರತುಪಡಿಸಿ ಇತರೆ ಯಾವುದೇ ಭಾಷೆಯ ಸಿ.ಆರ್.ಪಿ. ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ.

**4. ಮುಖ್ಯವಾದ ಸೂಚನೆಗಳು**

i. ಪ್ರಾಥಮಿಕ ವಿಭಾಗದ BRP (ಕ್ಷೇತ್ರ ಸಂಪನ್ಮೂಲ) ಮತ್ತು ಕ್ಲಸ್ಟರ್ ಸಂಪನ್ಮೂಲ ಹುದ್ದೆಗಳಿಗೆ ಸಿ.ಆರ್.ಪಿ ಆಯ್ಕೆ ಬಯಸುವವರು ಜ್ಞಾಪನಕ್ಕೆ ಲಗತ್ತಿಸಿರುವ ಅರ್ಜಿ ನಮೂನೆ **ಅನುಬಂಧ-2** ರಂತೆ ಮಾಹಿತಿಯನ್ನು ಲಗತ್ತಿಸಿ ಸಂಬಂಧಿಸಿದ ಬಿ.ಇ.ಓಗಳಿಗೆ ನಿಗಧಿ ಪಡಿಸಿದ ದಿನಾಂಕದೊಳಗೆ ಸಲ್ಲಿಸುವುದು. ಈ ರೀತಿ ಪಡೆದ ಅರ್ಜಿ ನಮೂನೆಗಳನ್ನು ಬಿ.ಇ.ಓಗಳು ದೃಢೀಕರಿಸಿ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಒಂದು ಪ್ರತಿಯನ್ನು ಸಲ್ಲಿಸುವುದು.

ii. ಪ್ರೌಢ ಶಾಲಾ ವಿಭಾಗದಿಂದ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗಳಿಗೆ ಆಯ್ಕೆ ಬಯಸುವವರು ಜ್ಞಾಪನಕ್ಕೆ ಲಗತ್ತಿಸಿರುವ ಅರ್ಜಿ ನಮೂನೆ **ಅನುಬಂಧ-3** ರಂತೆ ಮಾಹತಿಯನ್ನು ಲಗತ್ತಿಸಿ ಸಂಬಂಧಿಸಿದ ಬಿ.ಇ.ಓಗಳಿಗೆ ನಿಗಧಿ ಪಡಿಸಿದ ದಿನಾಂಕದೊಳಗೆ ಸಲ್ಲಿಸುವುದು. ಈ ರೀತಿ ಪಡೆದ ಅರ್ಜಿ ನಮೂನೆಗಳನ್ನು ಬಿ.ಇ.ಓಗಳು ದೃಢೀಕರಿಸಿ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಒಂದು ಪ್ರತಿಯನ್ನು ಸಲ್ಲಿಸುವುದು.

iii. **ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿ ನಮೂನೆಗಳನ್ನು ಆಧರಿಸಿ ಭಾಷೆ-1, ಉತ್ತರಿಸುವ ಮಾಧ್ಯಮ ಹಾಗೂ ಹುದ್ದೆವಾರು ಮತ್ತು ವಿಷಯವಾರು (ಪ್ರೌಢ ಕಲಾ/ ವಿಜ್ಞಾನ) ಪ್ರಶ್ನೆ ಪತ್ರಿಕೆಗಳ ಬೇಡಿಕೆಯನ್ನು ನಿರ್ದೇಶಕರು ಡಿ.ಎಸ್.ಇ.ಆರ್.ಟಿ ಇವರಿಗೆ ಸಲ್ಲಿಸುವುದು. ಸಲ್ಲಿಸುವಾಗ ಅಗತ್ಯಕ್ಕೆ ತಕ್ಕಂತೆ ಹಾಗೂ ಗೊಂದಲಗಳಿಗೆ ಅವಕಾಶವಿಲ್ಲದಂತೆ ಪ್ರಶ್ನೆ ಪತ್ರಿಕೆಗಳ ಬೇಡಿಕೆಯನ್ನು ಸ್ಪಷ್ಟವಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಇವರಿಗೆ ಉಪನಿರ್ದೇಶಕರು (ಅಭಿವೃದ್ಧಿ) ರವರು ನಿಗಧಿ ಪಡಿಸಿದ ದಿನಾಂಕದೊಳಗೆ ಸಲ್ಲಿಸುವುದು.**

iv. ಪ್ರೌಢ ಶಾಲಾ ವಿಭಾಗದ ಬಿ.ಆರ್.ಪಿ ಹುದ್ದೆಗಳಿಗೆ ವಿಜ್ಞಾನ ಹಾಗೂ ಕಲಾ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆಯ್ಕೆ ಪರೀಕ್ಷೆಯನ್ನು ನಡೆಸಿ, ಪ್ರತ್ಯೇಕವಾದ ಮೆರಿಟ್ ಪಟ್ಟಿಯನ್ನು ತಯಾರಿಸಲಾಗುವುದು.

v. ಸ್ಥಳ ನಿಯುಕ್ತಿಯನ್ನು ಈ ಕಛೇರಿಯಿಂದ ಪ್ರತ್ಯೇಕ ಆದೇಶ ಬಂದ ನಂತರ ಪ್ರಾರಂಭಿಸುವುದು ಹಾಗೂ ಹಾಲಿ ಜಿಲ್ಲಾ ಮಟ್ಟದಲ್ಲಿ ಪ್ರಚಲಿತವಾಗಿರುವ ಕೌನ್ಸಿಲಿಂಗ್ ಮೂಲಕವೇ ನಡೆಸತಕ್ಕದ್ದು

vi. ಜಿಲ್ಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಆಯ್ಕೆ ಪ್ರಕ್ರಿಯೆಯನ್ನು ರಿಕ್ತ ಸ್ಥಾನಗಳಿಗೆ ನಡೆಸತಕ್ಕದ್ದು. ಆಯ್ಕೆ ಪಟ್ಟಿಯ ಪ್ರಕಾರ ಅಭ್ಯರ್ಥಿಗಳನ್ನು ಖಾಲಿ ಹುದ್ದೆ ಆಯ್ಕೆ ಮಾಡಿಕೊಳ್ಳಲು ಕೌನ್ಸಿಲಿಂಗ್‌ಗೆ ಕರೆಯುವುದು.

vii. ಶಿಕ್ಷಕರು ಆಯ್ಕೆ ಬಯಸುವ ಬಿ.ಆರ್.ಪಿ/ಸಿ.ಆರ್.ಪಿ ಹುದ್ದೆಗಳಿಗನುಗುಣವಾಗಿ ಮಾಧ್ಯಮವಾರು ಪ್ರತ್ಯೇಕ ಮೆರಿಟ್ ಪಟ್ಟಿಯನ್ನು ಅಭ್ಯರ್ಥಿ ಲಿಖಿತ ಪರೀಕ್ಷೆ ಹಾಗೂ ಸೇವಾನುಭವ ಹಾಗೂ ವಿದ್ಯಾರ್ಹತೆಗಳಿಂದ ಗಳಿಸಿದ ಒಟ್ಟು ಅಂಕಗಳನ್ನು ಆಧರಿಸಿ ಜಿಲ್ಲಾ ಮೆರಿಟ್ ಪಟ್ಟಿಯನ್ನು ಉಪನಿರ್ದೇಶಕರು(ಅಭಿವೃದ್ಧಿ) ಇವರು ಸಿದ್ಧಪಡಿಸುವುದು. ಸಿದ್ಧಪಡಿಸಿದ ಜಿಲ್ಲಾ ಮಟ್ಟದ ಮೆರಿಟ್ ಪಟ್ಟಿಯನ್ನು ಉಪನಿರ್ದೇಶಕರು(ಆಡಳಿತ) ಇವರಿಗೆ ನೀಡುವುದು. ಸದರಿ ಹುದ್ದೆಗಳ ಸ್ಥಳ ನಿಯುಕ್ತಿಗೆ ಪ್ರತ್ಯೇಕವಾಗಿ ವೇಳಾಪಟ್ಟಿಯನ್ನು ನೀಡಲಾಗುವುದು.

**5. ಆಯ್ಕೆ ಪ್ರಕ್ರಿಯೆ:-**

**5.1 ಪರೀಕ್ಷೆ :** ಆಯ್ಕೆ ಪರೀಕ್ಷೆಯನ್ನು ಸಂಬಂಧಿಸಿದ ಜಿಲ್ಲಾ ಡಯಟ್ ಪ್ರಿನ್ಸಿಪಾಲ್‌ರ ನೇತೃತ್ವದಲ್ಲಿ ನಡೆಸಲಾಗುತ್ತದೆ.

i ಆಯ್ಕೆ ಪ್ರಕ್ರಿಯೆ ಆಧಾರಗಳು: 1) ಲಿಖಿತ ಪರೀಕ್ಷೆ -80 ಅಂಕಗಳು , 2) ವಿದ್ಯಾರ್ಹತೆ – 10 ಅಂಕಗಳು 3) ಸೇವಾನುಭವ – 10 ಅಂಕಗಳು. ಗರಿಷ್ಠ - 100 ಅಂಕಗಳು.

ii ನಿರ್ದೇಶಕರು ಡಿ.ಎಸ್.ಇ.ಆರ್.ಟಿ ಇವರು ನಿರ್ವಹಿಸುವ ಕಾರ್ಯಗಳು: ಪ್ರಶ್ನೆ ಪತ್ರಿಕೆ ಸಿದ್ಧತೆ, ಪರೀಕ್ಷಾ ನಿರ್ವಹಣೆ, ಉತ್ತರ ಪತ್ರಿಕೆಗಳ ಮೌಲ್ಯ ಮಾಪನ, ಫಲಿತಾಂಶ ಪ್ರಕಟಣೆ ಹಾಗೂ ಜಿಲ್ಲಾವಾರು ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ ಉಪನಿರ್ದೇಶಕರು (ಅಭಿವೃದ್ಧಿ ರವರಿಗೆ ರವಾನಿಸುವುದು) ರವಾನಿಸುವುದು.

iii ಪ್ರಶ್ನೆ ಪತ್ರಿಕೆಗಳನ್ನು ಡಿ.ಎಸ್.ಇ.ಆರ್.ಟಿ. ಸಿದ್ಧಪಡಿಸುತ್ತದೆ. ಪ್ರಶ್ನೆ ಪತ್ರಿಕೆಯನ್ನು ಕನ್ನಡ ಮತ್ತು ಉರ್ದು ಮಾಧ್ಯಮದಲ್ಲಿ ಮಾತ್ರ ನೀಡಲಾಗುತ್ತದೆ.

iv ಲಿಖಿತ ಪರೀಕ್ಷೆಯು ಇಡೀ ರಾಜ್ಯದಲ್ಲಿ ವೇಳಾ ಪಟ್ಟಿಯಂತೆ ಒಂದೇ ದಿನ ನಡೆಯುತ್ತದೆ.

v ಉಪನಿರ್ದೇಶಕರು (ಅಭಿವೃದ್ಧಿ) ಇವರು ಬಿ.ಇ.ಓ. ಗಳಿಂದ ಪಡೆದ ಅಭ್ಯರ್ಥಿಗಳ ಅರ್ಜಿ ನಮೂನೆಗಳಲ್ಲಿನ ಸೇವಾನುಭವ ಮತ್ತು ಗಳಿಸಿದ ವಿದ್ಯಾರ್ಹತೆ (ಗರಿಷ್ಠ 10+10 ಅಂಕ)

ಮಾಹಿತಿಯನ್ನು ಆಧರಿಸಿ ಈ ಜ್ಞಾಪನದಲ್ಲಿ ನೀಡಿದ ಸೂಚನೆಗಳಿಗೆ ಅನುಗುಣವಾಗಿ ಅಂಕಗಳನ್ನು ನೀಡಿ ಜಿಲ್ಲಾ ಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ ಇಟ್ಟುಕೊಳ್ಳುವುದು.

vi ಲಿಖಿತ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ತರುವಾಯ ಮೆರಿಟ್ ಪಟ್ಟಿಯನ್ನು (ಲಿಖಿತ ಪರೀಕ್ಷೆ 80 ಅಂಕಗಳಿಗೆ) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ತಯಾರಿಸಿ, ಉಪನಿರ್ದೇಶಕರು(ಅಭಿವೃದ್ಧಿ) ಇವರಿಗೆ ಕಳುಹಿಸುವುದು.

vii ಉಪನಿರ್ದೇಶಕರು(ಅಭಿವೃದ್ಧಿ) ಇವರು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರಿಂದ ಪಡೆದ ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಅಂಕಗಳಿಗೆ ಅಭ್ಯರ್ಥಿಗಳ ಸೇವಾ ಅನುಭವ ಹಾಗೂ ವಿದ್ಯಾರ್ಹತೆಗಳಿಂದ ಗಳಿಸಿದ ಅಂಕಗಳನ್ನು ಸೇರಿಸಿ ಅಭ್ಯರ್ಥಿಗಳ ಜಿಲ್ಲಾ ಮಟ್ಟದ ಮೆರಿಟ್ ಪಟ್ಟಿಯನ್ನು ತಯಾರಿಸುವುದು. ಈ ಮೆರಿಟ್ ಪಟ್ಟಿಯನ್ನು ಉಪನಿರ್ದೇಶಕರು(ಆಡಳಿತ) ಇವರಿಗೆ ರವಾನಿಸುವುದು.

viii ಉಪನಿರ್ದೇಶಕರು(ಅಭಿವೃದ್ಧಿ) ಇವರು ಅಭ್ಯರ್ಥಿಗಳ ವಿದ್ಯಾರ್ಹತೆ ಮತ್ತು ಸೇವಾ ಅನುಭವ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಅಂಕ ನಿರ್ಧಾರ ಮಾಡುವುದು.

ix ಅರ್ಜಿದಾರರ ಮಾಹಿತಿ ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಿ ಅವರ ಮೇಲೆ ಕೆ.ಸಿ.ಎಸ್.ಆರ್. ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

x ಅರ್ಜಿ ನಮೂನೆಯಲ್ಲಿ ಶಿಕ್ಷಕರು ಒದಗಿಸಿರುವ ವಿದ್ಯಾರ್ಹತೆ ಹಾಗೂ ಸೇವಾ ಅನುಭವ ಮಾಹಿತಿ ಪರಿಶೀಲಿಸಿ 20 ಅಂಕಗಳಿಗೆ ಗಳಿಸಿದ ಅಂಕಗಳನ್ನು ಡಿಡಿಪಿಐ(ಆಡಳಿತ) ಇವರಿಗೆ ಡಯಟ್ ಪ್ರಾಂಶುಪಾಲರು ನೀಡುವುದು. ಇಲ್ಲಿ ಗಳಿಸಿದ ಅಂಕಗಳನ್ನು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳೊಂದಿಗೆ ಸೇರಿಸಿ ಮೆರಿಟ್ ಪಟ್ಟಿಯನ್ನು ತಯಾರಿಸುವುದು. ಈ ಮೆರಿಟ್ ಪಟ್ಟಿಯನ್ನು ಆಧರಿಸಿ ನೀಡಿರುವ ಸೂಚನೆಗನುಗುಣವಾಗಿ ಖಾಲಿ ಇರುವ ಬಿ.ಆರ್.ಪಿ. ಹಾಗೂ ಸಿ.ಆರ್.ಪಿ. ಹುದ್ದೆಗಳನ್ನು ಭರ್ತಿ ಮಾಡಲು ಈ ಕಛೇರಿಯಿಂದ ಮುಂದಿನ ಆದೇಶ ಬಂದ ನಂತರ ಕ್ರಮ ವಹಿಸುವುದು.

xi ಸಿ.ಆರ್.ಪಿ ಮತ್ತು ಬಿ.ಆರ್.ಪಿ ಯಾಗಿ ಆಯ್ಕೆಯಾಗಲು ಲಿಖಿತ ಪರೀಕ್ಷೆ, ಸೇವಾನುಭವ ಮತ್ತು ವಿದ್ಯಾರ್ಹತೆಯಿಂದ ಕನಿಷ್ಠ 35 ಅಂಕಗಳನ್ನು ಗಳಿಸಿರಬೇಕು.

**5.2 ಲಿಖಿತ ಪರೀಕ್ಷೆಯ ವಿಷಯಗಳು :**

❖ <u>ಪ್ರಾಥಮಿಕ ಶಾಲಾ ವಿಭಾಗದ ಬಿ.ಆರ್.ಪಿ. ಮತ್ತು ಸಿ.ಆರ್.ಪಿ. ಹುದ್ದೆಗಳಿಗೆ ಪರೀಕ್ಷಾ ವಿಷಯ ಮತ್ತು ಅಂಕಗಳು.</u>

| | | | |
|---|---|---|---|
| i. | ಭಾಷೆ-1: ಕನ್ನಡ/ ಉರ್ದು | - | 10 ಅಂಕ |
| ii. | ಭಾಷೆ-2 : ಆಂಗ್ಲ ಭಾಷೆ | - | 10 ಅಂಕ |
| iii. | ಕೋರ್ ವಿಷಯಗಳು : ಗಣಿತ | - | 10 ಅಂಕ |
| | ಸಾಮಾನ್ಯ ವಿಜ್ಞಾನ, ಪರಿಸರ ಅಧ್ಯಯನ | - | 10 ಅಂಕ |
| | ಸಮಾಜ ವಿಜ್ಞಾನ. | - | 10 ಅಂಕ |
| | (1ರಿಂದ 8ನೇ ತರಗತಿ ಪಠ್ಯವನ್ನು ಆಧರಿಸಿ ಪ್ರಶ್ನೆ ಪತ್ರಿಕೆ ರಚಿಸಲಾಗುವುದು) | | |
| iv. | ಸಾಮಾನ್ಯ ಜ್ಞಾನ(General Knowledge) | - | 10 ಅಂಕ |
| v. | ಬೋಧನ ಶಾಸ್ತ್ರ (Pedagogy) | - | 10 ಅಂಕ |
| vi. | ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಚಲಿತ ವಿದ್ಯಮಾನಗಳು. | - | 10 ಅಂಕ |

(Recent Developments in educational field)

ಒಟ್ಟು - <u>80 ಅಂಕ</u>

ಪ್ರತೀ ವಿಷಯಕ್ಕೆ 10 ರಂತೆ ಒಟ್ಟು 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗುತ್ತದೆ.

**5.3 ಪ್ರೌಢ ಶಾಲಾ ವಿಭಾಗದ ಬಿ.ಆರ್.ಪಿ. ಕಲಾ ಮತ್ತು ವಿಜ್ಞಾನ – ಗಣಿತ ಹುದ್ದೆಗಳಿಗೆ ಪ್ರತ್ಯೇಕ ಆಯ್ಕೆ ಪರೀಕ್ಷೆ ನಡೆಸಲಾಗುವುದು. ಕಲಾ ವಿಭಾಗದ ಪ್ರೌಢ ಶಾಲಾ ಬಿ.ಆರ್.ಪಿ. ಹುದ್ದೆಗಳಿಗೆ ಪರೀಕ್ಷಾ ವಿಷಯಗಳ ಒಟ್ಟು ಅಂಕ 80.**

i ಭಾಷೆ -1: ಕನ್ನಡ/ - 10 ಅಂಕ

ii ಭಾಷೆ -2: ಆಂಗ್ಲ ಭಾಷೆ - 10 ಅಂಕ

iii ಕೋರ್ ವಿಷಯ: ಸಮಾಜ ವಿಜ್ಞಾನ. (5ರಿಂದ 10ನೇ ತರಗತಿ).

1) ಇತಿಹಾಸ (History) - 10 ಅಂಕ

2) ಭೂಗೋಳ (Geography) - 10 ಅಂಕ

3) ಪೌರಾಡಳಿತ (Civics) - 05 ಅಂಕ

4) ಆರ್ಥಿಕ ಶಾಸ್ತ್ರ (Economics) - 05 ಅಂಕ

(5 ರಿಂದ 10ನೇ ತರಗತಿ ಪಠ್ಯವನ್ನು ಆಧರಿಸಿ ಪ್ರಶ್ನೆ ಪತ್ರಿಕೆ ರಚಿಸಲಾಗುವುದು)

iv ಸಾಮಾನ್ಯ ಜ್ಞಾನ (General Knowledge) - 10 ಅಂಕ

v ಬೋಧನ ಶಾಸ್ತ್ರ (Pedagogy) - 10 ಅಂಕ

vi ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಚಲಿತ ವಿದ್ಯಾಮಾನಗಳು.

(Recent Developments in educational field) - <u>10 ಅಂಕ</u>

ಒಟ್ಟು - <u>80 ಅಂಕ</u>

**5.4ವಿಜ್ಞಾನ-ಗಣಿತ ವಿಭಾಗದ ಪ್ರೌಢ ಶಾಲಾ ಬಿ.ಆರ್.ಪಿ ಹುದ್ದೆಗಳಿಗೆ ಪರೀಕ್ಷಾ ವಿಷಯಗಳು :**

i ಭಾಷೆ-1 : ಕನ್ನಡ - 10 ಅಂಕ

ii ಭಾಷೆ-2 : ಆಂಗ್ಲ ಭಾಷೆ. - 10 ಅಂಕ

iii ಕೋರ್ ವಿಷಯಗಳು : ಸಾಮಾನ್ಯ ವಿಜ್ಞಾನ (5 ರಿಂದ 10ನೇ ತರಗತಿ)

1) ರಸಾಯನ ಶಾಸ್ತ್ರ (Chemistry) - 05 ಅಂಕ

2) ಭೌತ ಶಾಸ್ತ್ರ (Physics) - 05 ಅಂಕ

3) ಜೀವ ಶಾಸ್ತ್ರ (Biology) - 05 ಅಂಕ

**iv ಕೋರ್ ವಿಷಯ ಗಣಿತ (Maths)**

1) ಅಂಕಗಣಿತ (Arithmetic) - 05 ಅಂಕ

2) ಬೀಜಗಣಿತ (Algebra) - 05 ಅಂಕ

3) ರೇಖಾಗಣಿತ (Geometry) - 05 ಅಂಕ

(5 ರಿಂದ 10ನೇ ತರಗತಿ ಪಠ್ಯವನ್ನು ಆಧರಿಸಿ ಪ್ರಶ್ನೆ ಪತ್ರಕೆ ರಚಿಸಲಾಗುವುದು)

v ಸಾಮಾನ್ಯ ಜ್ಞಾನ (General Knowledge) - 10 ಅಂಕ

vi ಭೋದನ ಶಾಸ್ತ್ರ (Pedagogy - 10 ಅಂಕ

vii ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಚಲಿತ ವಿದ್ಯಾಮಾನಗಳು - 10 ಅಂಕ

ಒಟ್ಟು - 80 ಅಂಕ

**5.5 ಸೇವಾ ಅನುಭವ ಮತ್ತು ವಿದ್ಯಾರ್ಹತೆಗೆ ಅಂಕಗಳು:- 20**

i. ಸೇವಾನುಭವ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಈ ಕೆಳಕಂಡ ಅವಧಿಗಳಿಗೆ ಶಿಕ್ಷಕರಾಗಿ ಸೇವಾನುಭವ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಅಂಕಗಳನ್ನು (Weightage) ನೀಡುವುದು. ಗರಿಷ್ಠ 10 ಅಂಕ.

1) 25 ವರ್ಷ ಹಾಗೂ ಮೇಲ್ಪಟ್ಟ ಅವಧಿಗೆ - 10 ಅಂಕ
2) 20 ರಿಂದ 24 ವರ್ಷ ಸಲ್ಲಿಸಿದ ಸೇವೆಗೆ - 08 ಅಂಕ
3) 15 ರಿಂದ 19 ವರ್ಷ ಸಲ್ಲಿಸಿದ ಸೇವೆಗೆ - 06 ಅಂಕ
4) 10 ರಿಂದ 14 ವರ್ಷ ಸಲ್ಲಿಸಿದ ಸೇವೆಗೆ - 05 ಅಂಕ

ii. ವಿದ್ಯಾರ್ಹತೆಗೆ ಈ ಕೆಳಕಂಡಂತೆ ಅಂಕಗಳನ್ನು ವಿತರಿಸಲಾಗಿದೆ ಗರಿಷ್ಠ 10 ಅಂಕ.

1) ಎಂ.ಎ/ ಎಂ.ಎಸ್ಸಿ/ ಎಂ.ಇಡಿ. ಸ್ನಾತ್ತಕೋತ್ತರ ಪದವಿಗಳಿಗೆ - 10 ಅಂಕ
2) ಬಿ.ಎ/ಬಿ.ಎಸ್ಸಿ/ಬಿ.ಇಡಿ ಇತ್ಯಾದಿ ಪದವಿಗಳಿಗೆ - 08 ಅಂಕ
3) ಪಿ.ಯು.ಸಿ.ಯಲ್ಲಿ
   ಅ) ಶೇಕಡಾ 60 ಹಾಗೂ ಅದಕ್ಕಿಂತ ಮೇಲ್ಪಟ್ಟ ಅಂಕಗಳಿಗೆ - 06 ಅಂಕ
   ಆ) ಶೇಕಡಾ 50 ರಿಂದ 59ರ ವರೆಗೆ ಗಳಿಸಿದ ಅಂಕಗಳಿಗೆ - 05 ಅಂಕ

**ಸೂಚನೆ: ವಿದ್ಯಾರ್ಹತೆಯನ್ನು ಆಧರಿಸಿ ಅಂಕಗಳನ್ನು ನೀಡುವಾಗ ಪ್ರತಿ ಅಭ್ಯರ್ಥಿಯು ಪಡೆದ ಉನ್ನತ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಿ ಅಂಕಗಳನ್ನು ನೀಡುವುದು.**

***ವಿಶೇಷ ಸೂಚನೆ:*** *1) ಸಾಮಾನ್ಯ ಜ್ಞಾನ (General Knowledge) ಈ ವಿಷಯಕ್ಕೆ ಸಂಬಂಧಿಸಿದಂತೆ ಜಾಗತಿಕ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟಕ್ಕೆ ಸಂಬಂಧಿಸಿದಂತೆ ವಿದ್ಯಾಮಾನಗಳಾದ ಜನಸಂಖ್ಯೆ, ಸಾಕ್ಷರತೆ, ಸಾಹಿತ್ಯ, ವಿಜ್ಞಾನ ಹಾಗೂ ಕ್ರೀಡೆ. ವಿಷಯಗಳ ವ್ಯಾಪ್ತಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ರಚಿಸಲಾಗುವುದು.*

*2) ಶೈಕ್ಷಣಿಕ ಕ್ಷೇತ್ರದಲ್ಲಿನ ಪ್ರಸ್ತುತ ವಿದ್ಯಾಮಾನಗಳ (Recent Developments) ವಿಷಯಕ್ಕೆ ಸಂಬಂಧಿಸಿದಂತೆ, ಶಿಕ್ಷಣದ ಹಕ್ಕು (ಆರ್.ಟಿ.ಇ), ರಾಷ್ಟ್ರೀಯ ಪಠ್ಯ ಕ್ರಮ (ಎನ್.ಸಿ.ಎಫ್ 2005), ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (ಸಿಸಿಇ)* (Continues and comprehensive Evaluation), *ಇಲಾಖೆಯ ಕಾರ್ಯಕ್ರಮ ಹಾಗೂ ಸರ್ವ ಶಿಕ್ಷಣ ಅಭಿಯಾನ ವಿಷಯಗಳ ವ್ಯಾಪ್ತಿಯಲ್ಲಿ ಪ್ರಶ್ನೆ ಪತ್ರಿಕೆಯನ್ನು ರಚಿಸಲಾಗುವುದು.*

**6. ನೇಮಕಾತಿ ಪ್ರಕ್ರಿಯೆ:**

i. ಆಯ್ಕೆ ಪ್ರಕ್ರಿಯೆ ಮೂಲಕ ಮೆರಿಟ್ ಪಟ್ಟಿಯನ್ನು ಪಡೆಯುವುದು. ಸ್ಥಳನಿಯುಕ್ತಿಗೆ ಪ್ರತ್ಯೇಕವಾಗಿ ವೇಳಾಪಟ್ಟಿಯನ್ನು ನೀಡಲಾಗುವುದು.

ii. ಸ್ಥಳ ನಿಯುಕ್ತಿ ಮಾಡುವಾಗ, ಮೊದಲು ಬಿ.ಆರ್.ಪಿ ಹುದ್ದೆಗಳಿಗೆ ಮೆರಿಟ್ ಆಧಾರದ ಮೇಲೆ ನಿಯುಕ್ತಿಗೊಳಿಸುವುದು. ತದನಂತರ ಸಿ.ಆರ್.ಪಿ ಹುದ್ದೆಗಳಿಗೆ ಮೆರಿಟ್ ಆಧಾರದ ಮೇಲೆ ನಿಯುಕ್ತಿಗೊಳಿಸಲು ಪ್ರಚಲಿತ ಇರುವ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸತಕ್ಕದ್ದು.

iii. ಜಿಲ್ಲಾ ಮಟ್ಟದ ಮೆರಿಟ್ ಪಟ್ಟಿಯನ್ನು ತಯಾರಿಸುವಾಗ ಪ್ರೌಢ ಶಾಲಾ ಬಿ.ಆರ್.ಪಿ ಕಲಾ ಮತ್ತು ಪ್ರೌಢ ಶಾಲಾ ಬಿ.ಆರ್.ಪಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ಹಾಗೂ ಪ್ರಾಥಮಿಕ ಶಾಲಾ ವಿಭಾಗದ ಬಿ.ಆರ್.ಪಿ. ಮತ್ತು ಸಿ.ಆರ್.ಪಿ ಹುದ್ದೆಗಳಿಗೆ ಪ್ರತ್ಯೇಕ ಪಟ್ಟಿಗಳನ್ನು ತಯಾರಿಸುವುದು.

iv. ಸ್ಥಳ ನಿಯುಕ್ತಿ ಮುಕ್ತಯವಾದ ನಂತರ ಸಂಪೂರ್ಣ ಜಿಲ್ಲೆಯಲ್ಲಿನ ಮೆರಿಟ್ ಪಟ್ಟಿಯಲ್ಲಿ ಕಾದಿರಿಸಿದ ಪಟ್ಟಿ (waiting list) ಎಂದು ಪರಿಗಣಿಸಬೇಕು. ಮುಂದೆ ಖಾಲಿ ಆಗುವ ಸ್ಥಾನಗಳಿಗೆ ಮೆರಿಟ್ ಆಧಾರದ ಮೇಲೆ ಸದರಿ ಪಟ್ಟಿಯಿಂದ ಸ್ಥಳ ನಿಯುಕ್ತಿಗೊಳಿಸತಕ್ಕದ್ದು. ಸದರಿ ಕಾಯ್ದಿರಿಸಿದ ಪಟ್ಟಿಗೆ ಸ್ಥಳ ನಿಯುಕ್ತಗೊಳಿಸಿದ ದಿನಾಂಕದಿಂದ ಒಂದು ವರ್ಷದವರೆಗೂ ಸಿಂಧುವಾಗಿರುತ್ತದೆ.

**<u>ವಿಶೇಷ ಸೂಚನೆ:</u> ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿ.ಆರ್.ಪಿ ಹಾಗು ಬಿ.ಆರ್.ಪಿಗಳಿಗೆ ಜೂನ್ 1-2012 ಕ್ಕೆ 3 ವರ್ಷಗಳು ಪೂರ್ಣವಾಗಿದ್ದಲ್ಲಿ, ಪುನಃ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ. ಆದರೆ ಆಯ್ಕೆಯಾದಲ್ಲಿ ಅವರನ್ನು ಈ ಹಿಂದೆ ಸಿ.ಆರ್.ಪಿ / ಬಿ.ಆರ್.ಪಿ ಯಾಗಿ ಸೇವೆ ಸಲ್ಲಿಸಿದ ಜಾಗದಲ್ಲಿ ಯಾವುದೇ ಕಾರಣಕ್ಕೂ ಸ್ಥಳ ನಿಯುಕ್ತಿಗೊಳಿಸಬಾರದು. ಎಲ್ಲಾರಿಗೂ ಪರೀಕ್ಷೆ ಕಡ್ಡಾಯವಾಗಿರುತ್ತದೆ.**

**ಆಯುಕ್ತರು ಹಾಗೂ ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**<u>ಇವರಿಗೆ ಕ್ರಮಕ್ಕಾಗಿ</u>**

(1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸೂಕ್ತ ಕ್ರಮಕ್ಕಾಗಿ.
(2) ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ ಡಯಟ್) ಸೂಕ್ತ ಕ್ರಮಕ್ಕಾಗಿ.
(3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ.

**<u>ಪ್ರತಿ ಸಂಬಂಧಿಸಿದವರಿಗೆ ಮಾಹಿತಿಗೆ ಕಳಿಸಿದೆ:</u>**

(1) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳುರು
(2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
(3) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
(4) ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
(5) ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
(6) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
(7) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
(8) ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.

F:\Admin Sec\Rekha\Shivakumar\Saba nadavali- BRP CRP.docx

## ಅನುಬಂಧ-1

### ಆಯ್ಕೆ ಪ್ರಕ್ರಿಯೆ ಬಗ್ಗೆ ವೇಳಾಪಟ್ಟಿ

| ಕ್ರಮ ಸಂಖ್ಯೆ | ಚಟುವಟಿಕೆ | ನಿರ್ವಹಿಸುವವರು | ದಿನಾಂಕ |
|---|---|---|---|
| 1 | ಅಧಿಕೃತ ಜ್ಞಾಪನಾ ಪತ್ರ ಹೊರಡಿಸುವುದು | ರಾಜ್ಯ ಯೋಜನಾ ನಿರ್ದೇಶಕರು | 23-04-2012 |
| 2 | ಪತ್ರಿಕಾ ಪ್ರಕಟಣೆ ಇಡೀ ರಾಜ್ಯದಲ್ಲಿ ಒಂದೇ ದಿನ ಹೊರಡಿಸುವುದು | ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) | 25-04-2012 |
| 3 | ಶಿಕ್ಷಕರಿಂದ ಅರ್ಜಿಸಲ್ಲಿಕೆ ಮತ್ತು ನೋಂದಣಿಗೆ ಕೊನೆಯ ದಿನಾಂಕ (ನಮೂನೆ ಲಗತ್ತಿಸಿದೆ) | ಶಿಕ್ಷಕರಿಂದ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ | 05-05-2012 |
| 4 | ಬಿ.ಇ.ಓ ರವರಿಂದ ನೊಂದಾಯಿತ ಅರ್ಜಿಗಳ ರವಾನೆ | ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ | 08-05-2012 |
| 5 | ಪ್ರಶ್ನೆಪತ್ರಿಕೆ ಬೇಡಿಕೆಯನ್ನು ಡಿ.ಎಸ್.ಇ.ಆರ್.ಟಿಗೆ ಸಲ್ಲಿಸುವುದು | ಉಪನಿರ್ದೇಶಕರು (ಅಭಿವೃದ್ಧಿ) | 14-05-2012 |
| 6 | ಪ್ರಶ್ನೆಪತ್ರಿಕೆ ತಯಾರಿ ಮತ್ತು ಮುದ್ರಣ | ಡಿ.ಎಸ್.ಇ.ಆರ್.ಟಿ | 15-05-2012 |
| 7 | ಉಪನಿರ್ದೇಶಕರು (ಅಭಿವೃದ್ಧಿ) ಪ್ರಶ್ನೆಪತ್ರಿಕೆ ಪಡೆಯುವುದು | ಡಿ.ಎಸ್.ಇ.ಆರ್.ಟಿ ಯಿಂದ | 19-05-2012 |
| 8 | ಲಿಖಿತ ಪರೀಕ್ಷೆ ಇಡೀ ರಾಜ್ಯದಲ್ಲಿ ಒಂದೇ ದಿನ ನಡೆಸುವುದು | ಉಪನಿರ್ದೇಶಕರು (ಅಭಿವೃದ್ಧಿ) ಗೊತ್ತುಪಡಿಸಿದ ಸ್ಥಳದಲ್ಲಿ | 21-05-2012 |
| 9 | ಮೌಲ್ಯ ಮಾಪನ ನಡೆಸುವುದು | ಉಪನಿರ್ದೇಶಕರು (ಅಭಿವೃದ್ಧಿ) ಗೊತ್ತು ಪಡಿಸಿದ ಸ್ಥಳದಲ್ಲಿ | 24-05-2012 |

<u>ಅನುಬಂಧ – 2</u>

**ಪ್ರಾಥಮಿಕ ವಿಭಾಗದ ಬಿ.ಆರ್.ಪಿ/ಸಿ.ಆರ್.ಪಿ. ಹುದ್ದೆಗಳ ಆಯ್ಕೆಗಾಗಿ ಸೇವಾನಿರತ ಶಿಕ್ಷಕರು / ಮುಖ್ಯ ಶಿಕ್ಷಕರು ಸಲ್ಲಿಸುವ ಅರ್ಜಿ ನಮೂನೆ.**

| | | |
|---|---|---|
| 1 | ಶಿಕ್ಷಕರ ಹೆಸರು ಮತ್ತು ಕೆಲಸ ಮಾಡುತ್ತಿರುವ ಶಾಲೆ ಹಾಗೂ ವಾಸಸ್ಥಳದ ವಿವರ. | |
| 2 | ಶಿಕ್ಷಕರ ದೂರವಾಣಿ ಸಂಖ್ಯೆ | |
| 3 | ಜನ್ಮ ದಿನಾಂಕ | |
| 4 | ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ ದಿನಾಂಕ: | |
| 5 | ಬಿ.ಆರ್.ಪಿ./ ಸಿ.ಆರ್.ಪಿ. ಹುದ್ದೆಗೆ ಜಿಲ್ಲಾ ಜ್ಞಾಪನಾ ಹೊರಡಿಸಿದ ದಿನಾಂಕಕ್ಕೆ ಶಿಕ್ಷಕ/ಮುಖ್ಯ ಶಿಕ್ಷಕರಾಗಿ ಸಲ್ಲಿಸಿದ ಒಟ್ಟು ಸೇವಾವಧಿ | ............ವರ್ಷ .............ತಿಂಗಳು ...........ದಿನಗಳು |
| 6 | ಶಿಕ್ಷಕರು ಪಡೆದ ವಿದ್ಯಾರ್ಹತೆ, ಪಿ.ಯು.ಸಿ. ಪದವಿ. ಸ್ನಾತ್ತಕೋತ್ತರ ಪದವಿ ಇತ್ಯಾದಿ ನಮೂದಿಸುವುದು ಮತ್ತು ದಾಖಲೆಗೆ ಅಂಕ ಪಟ್ಟಿ ಲಗತ್ತಿಸುವುದು. | |
| 7 | ಪಿ.ಯು.ಸಿ.ಯಲ್ಲಿ ಅಧ್ಯಯನ ಮಾಡಿದ ಐಚ್ಛಿಕ ವಿಷಯಗಳು | |
| 8 | ಶಾಲೆಯಲ್ಲಿ ಪ್ರಸ್ತುತ ಬೋಧಿಸುತ್ತಿರುವ ವಿಷಯಗಳು ಮತ್ತು ಬೋಧಿಸುತ್ತಿರುವ ಮಾಧ್ಯಮ | |
| 9 | ಅಭ್ಯರ್ಥಿಯು ಯಾವ ಹುದ್ದೆಗೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸುತ್ತಿರುವುದು. (ಬಿ.ಆರ್.ಪಿ ಅಥವಾ ಸಿ.ಆರ್.ಪಿ. ಅಥವಾ 02 ಹುದ್ದೆಗೆ ಸೇರಿ ಸ್ಪಷ್ಟವಾಗಿ ನಮೂದಿಸಿ) | |
| 10 | ಈ ಹಿಂದೆ ಬಿ.ಆರ್.ಪಿ. ಅಥವಾ ಸಿ.ಆರ್.ಪಿ.ಯಾಗಿ ಕಾರ್ಯ ನಿರ್ವಹಿಸಿದಲ್ಲಿ ಅವಧಿ ಮತ್ತು ಸ್ಥಳ ನಮೂದಿಸುವುದು. | |
| 11 | ಸಿ.ಆರ್.ಪಿ.ಯು ಯಾವ ಮಾಧ್ಯಮದ ಹುದ್ದೆಗೆ ಅರ್ಜಿ ಸಲ್ಲಿಸಿರುವುದು. (ಕನ್ನಡ/ಉರ್ದು) | |
| 12 | ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಉತ್ತರಿಸುವ ಮಾಧ್ಯಮ ಮತ್ತು ಭಾಷೆ –1 : ಕನ್ನಡ/ ಉರ್ದು/ ನಮೂದಿಸುವುದು. | 1. ಲಿಖಿತ ಪರೀಕ್ಷೆಯಲ್ಲಿ ಉತ್ತರಿಸುವ ಮಾಧ್ಯಮ.......................... 2.ಭಾಷೆ– 1 : ........................... |

**ಅಭ್ಯರ್ಥಿಯ ಸ್ವಯಂ ಘೋಷಣೆ:–** ನಾನು ಮೇಲೆ ಹೇಳಿದ ವಿವರಗಳು ಸತ್ಯನಿಷ್ಠವಾಗಿಲ್ಲದಿದ್ದಲ್ಲಿ ಇಲಾಖೆ ಜರುಗಿಸುವ ಶಿಸ್ತುಕ್ರಮಕ್ಕೆ ಬದ್ಧನಾಗಿರುತ್ತೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ

ಸ್ಥಳ:–
ದಿನಾಂಕ:–

ಮುಖ್ಯೋಪಾಧ್ಯಯರ ಸಹಿ ಮತ್ತು
ಸೀಲು

ಮೇಲು ಸಹಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು,
.........................ವಲಯ
....................ಜಿಲ್ಲೆ.

## ಅನುಬಂಧ –3

**ಪ್ರೌಢಶಾಲಾ ವಿಭಾಗದ ಬಿ.ಆರ್.ಪಿ. ಹುದ್ದೆಗಳ ಆಯ್ಕೆಗಾಗಿ ಸೇವಾನಿರತ ಶಿಕ್ಷಕರು ಸಲ್ಲಿಸುವ ಅರ್ಜಿ ನಮೂನೆ.**

| | | |
|---|---|---|
| 1 | ಶಿಕ್ಷಕರ ಹೆಸರು ಮತ್ತು ಕೆಲಸ ಮಾಡುತ್ತಿರುವ ಶಾಲೆಯ ವಿಳಾಸ | |
| 2 | ಶಿಕ್ಷಕರ ದೂರವಾಣಿ ಸಂಖ್ಯೆ | |
| 3 | ಜನ್ಮ ದಿನಾಂಕ | |
| 4 | ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿ ಕೆಲಸಕ್ಕೆ ಸೇರಿದ ದಿನಾಂಕ | |
| 5 | ಬಿ.ಆರ್.ಪಿ. ಹುದ್ದೆಗೆ ಜ್ಞಾಪನಾ ಹೊರಡಿಸಿದ ದಿನಾಂಕಕ್ಕೆ ಶಿಕ್ಷಕ/ಮುಖ್ಯ ಶಿಕ್ಷಕರಾಗಿ ಸಲ್ಲಿಸಿದ ಒಟ್ಟು ಸೇವಾವಧಿ | ...............ವರ್ಷ ..............ತಿಂಗಳು ..............ದಿನಗಳು |
| 6 | ಶಿಕ್ಷಕರು ಪಡೆದ ವಿದ್ಯಾರ್ಹತೆ, ಪಿ.ಯು.ಸಿ. ಪದವಿ. ಸ್ನಾತ್ತಕೋತ್ತರ ಪದವಿ ಇತ್ಯಾದಿ ನಮೂದಿಸುವುದು ಮತ್ತು ದಾಖಲೆಗೆ ಅಂಕ ಪಟ್ಟಿ ಲಗತ್ತಿಸುವುದು. | |
| 7 | a) ಪದವಿಯಲ್ಲಿ ಅಧ್ಯಯನ ಮಾಡಿದ ಐಚ್ಛಿಕ ವಿಷಯಗಳು<br>b) ಬಿ.ಇಡಿ.ನಲ್ಲಿ ಬೋಧನಾ ವಿಷಯಗಳು | |
| 8 | ಶಾಲೆಯಲ್ಲಿ ಪ್ರಸ್ತುತ ಬೋಧಿಸುತ್ತಿರುವ ವಿಷಯಗಳು ಮತ್ತು ಬೋಧಿಸುತ್ತಿರುವ ಮಾಧ್ಯಮ | |
| 9 | ಬಿ.ಆರ್.ಪಿ.ಯ ಯಾವ ಹುದ್ದೆ ಆಯ್ಕೆ ಬಯಸಿ ಅರ್ಜಿ ಸಲ್ಲಿಸುತ್ತಿರುವುದು. (1) ವಿಜ್ಞಾನ-ಗಣಿತ, (2) ಕಲಾ ಹುದ್ದೆಗೆ ಎಂದು ನಮೂದಿಸುವುದು. | |
| 10 | ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಉತ್ತರಿಸುವ ಮಾಧ್ಯಮ ಮತ್ತು ಭಾಷೆ -1: ಕನ್ನಡ/ಉರ್ದು ನಮೂದಿಸುವುದು. | 1) ಲಿಖಿತ ಪರೀಕ್ಷೆಯಲ್ಲಿ ಉತ್ತರಿಸುವ ಮಾಧ್ಯಮ..............<br>2) ಭಾಷೆ- 1: ................................ |

**<u>ಅಭ್ಯರ್ಥಿಯ ಸ್ವಯಂ ಘೋಷಣೆ:</u>**- ನಾನು ಮೇಲೆ ಹೇಳಿದ ವಿವರಗಳು ಸತ್ಯನಿಷ್ಠವಾಗಿಲ್ಲದಿದ್ದಲ್ಲಿ ಇಲಾಖೆ ಜರುಗಿಸುವ ಶಿಸ್ತುಕ್ರಮಕ್ಕೆ ಬದ್ಧನಾಗಿರುತ್ತೇನೆ.

ಅಭ್ಯರ್ಥಿಯ ಹೆಸರು ಮತ್ತು ಸಹಿ

ಸ್ಥಳ:-
ದಿನಾಂಕ:-

ಸಂಬಂಧಪಟ್ಟ ಶಾಲೆಯ
ಮುಖ್ಯೋಪಾಧ್ಯಯರ ಸಹಿ ಮತ್ತು ಸೀಲು

ಮೇಲು ಸಹಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು,
.........................ವಲಯ
....................ಜಿಲ್ಲೆ.

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು - 560 001

ಸಂಖ್ಯೆ: ಸಶಿಅ/ಶೈತ/ಸಿ1(5)/ಸಿ.ಆರ್.ಪಿ. ಬಿ.ಆರ್.ಪಿ/2012-13 ದಿನಾಂಕ: 23-04-2012

## ಪತ್ರಿಕಾ ಪ್ರಕಟಣೆ

ರಾಜ್ಯದಲ್ಲಿ ಖಾಲಿ ಇರುವ ಸಮೂಹ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ) ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿ (ಬಿ.ಆರ್.ಪಿ) ಹುದ್ದೆಗಳನ್ನು ಭರ್ತಿಮಾಡಲು ಸೇವೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಪ್ರೌಢ ಶಾಲಾ ಶಿಕ್ಷಕರುಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 05.05.2012 ರಂದು ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸುವುದು.

**ಹೆಚ್ಚಿನ ಮಾಹಿತಿಗಾಗಿ www.ssakarnataka.gov.in ಇದನ್ನು ನೋಡುವುದು.**

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

F:\Admin Sec\Rekha\Shivakumar\Saba nadavali- BRP CRP.docx